**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ:ಸಿ4(6)ರಜೆ.01/2013-14 ದಿನಾಂಕ:21.09.2016

**ಜ್ಞಾಪನ**

ವಿಷಯ: 2016-17ನೇ ಸಾಲಿನಲ್ಲಿ ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ನಿಗದಿಪಡಿಸಿದ ಶಾಲಾ ದಿನಗಳ ಬೋಧನಾ ಅವಧಿ ಸರಿದೂಗಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಜ್ಞಾಪನಾ ಸಂಖ್ಯೆ.ಸಿ4(6)ರಜೆ.01/13-14 ದಿ:15.02.2016.

&&&

**ಪ್ರಸ್ತಾವನೆ:**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1)ರ ಸುತ್ತೋಲೆಯಲ್ಲಿ 2016-17ನೇ ಸಾಲಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ದಿನಾಂಕ: 09.10.2016 ರಿಂದ 27.10.2016ರವರೆಗೆ ಮಧ್ಯಂತರ ರಜೆ ಮತ್ತು ದಿನಾಂಕ: 11.04.2017 ರಿಂದ 28.05.2017ರವರೆಗೆ ಬೇಸಿಗೆ ರಜೆಯನ್ನು ನಿಗದಿಪಡಿಸಿ, 240 ದಿವಸ ಶಾಲೆ ನಡೆಯುವ ದಿನಗಳೆಂದು ಪರಿಗಣಿಸಲಾಗಿತ್ತು. ಈ ಮಧ್ಯೆ ರಾಜ್ಯದಲ್ಲಿ ಮುಷ್ಕರ ಮತ್ತು ಬಂದ್‌ಗಳು ನಡೆದು, ಶಾಲಾ ಕೆಲಸದ ದಿನಗಳು ಕಡಿಮೆ ಆಗಿರುವುದರಿಂದ ಶೈಕ್ಷಣಿಕ ಹಿತದೃಷ್ಟಿಯಿಂದ ಮುಷ್ಕರದಲ್ಲಿ ಕಡಿತಗೊಂಡ ಬೋಧನ ಅವಧಿಗಳನ್ನು ಸರಿದೂಗಿಸುವ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶಿಸಿದೆ.

**ಆದೇಶ:**

2016-17ನೇ ಸಾಲಿನಲ್ಲಿ ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ನಿಗದಿಪಡಿಸಿದ ಶಾಲಾ ದಿನಗಳ ಬೋಧನಾ ಅವಧಿ ಕಡಿಮೆಯಾಗುವ ಹಿನ್ನೆಲೆಯಲ್ಲಿ, ಮಧ್ಯಂತರ ರಜೆಯನ್ನು ದಿನಾಂಕ: 09.10.2016 ರಿಂದ 23.10.2016ರವರೆಗೆ ನಿಗಧಿಪಡಿಸಿ, ದಿನಾಂಕ: 24.10.2016ರಿಂದ ಶಾಲೆ ಪುನಾರಂಭಿಸಲು ಆದೇಶಿಸಿದೆ. ಮುಂದುವರೆದು ನವೆಂಬರ್ 2016ರ ಮಾಹೆಯಲ್ಲಿ ಬರುವ 4 ಶನಿವಾರಗಳು ಒಳಗೊಂಡಂತೆ [ಸಾಮಾನ್ಯ ದಿನದಂತೆ ಅಂದರೆ ಬೆಳಿಗ್ಗೆಯಿಂದ ಸಂಜೆಯವರೆಗೆ] ಶಾಲೆ ನಡೆಸಲು ಹಾಗೂ ಉರ್ದು ಶಾಲೆಗಳಿಗೆ ನವೆಂಬರ್ ಮಾಹೆಯಲ್ಲಿ ಬರುವ ಅರ್ಧ ದಿನಗಳ ಶಾಲಾ ಅವಧಿಯನ್ನು ಸಾಮಾನ್ಯ ದಿನದಂತೆ ಪೂರ್ಣಾವಧಿ ಶಾಲೆ ನಡೆಸುವಂತೆ ತಿಳಿಸಿದೆ. ಈ ಮಧ್ಯೆ ಸರ್ಕಾರಿ ರಜಾ ದಿನಗಳು ಬಂದಲ್ಲಿ ಆ ದಿನಗಳನ್ನು ಮುಂದಿನ ಮಾಹೆಯಲ್ಲಿ ಸರಿದೂಗಿಸಿಕೊಳ್ಳಲು ಸೂಚಿಸಿದೆ.

[ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ
ಆದೇಶದ ಮೇರೆಗೆ]

ಆಯುಕ್ತರು
**ಸಾರ್ವಜನಿಕ ಶಿಕ್ಷಣ ಇಲಾಖೆ**

**ಗೆ**

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ / ಧಾರವಾಡ ಆಯುಕ್ತಾಲಯ ಇವರ ಮುಂದಿನ ಕ್ರಮಕ್ಕಾಗಿ.
2. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ ರವರ ಮುಂದಿನ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ನಿಮ್ಮ ಅಧೀನದಲ್ಲಿ ಬರುವ ಶಾಲಾ ಮುಖ್ಯಸ್ಥರುಗಳಿಗೆ ತಿಳಿಸಲು ಸೂಚಿಸಿದೆ.
4. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ನಿಮ್ಮ ಅಧೀನದಲ್ಲಿ ಬರುವ ಶಾಲಾ ಮುಖ್ಯಸ್ಥರುಗಳಿಗೆ ತಿಳಿಸಲು ಸೂಚಿಸಿದೆ.
5. ಅಧ್ಯಕ್ಷರು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮತ್ತು ಪ್ರೌಢಶಾಲಾ ಸಹ ಶಿಕ್ಷಕರ ಸಂಘ ಇವರ ಮಾಹಿತಿಗಾಗಿ.
6. ಕಛೇರಿ ಪ್ರತಿ.

\\10.96.135.22\e\e\est4\"b.azamrahi\r.t.i. hajarata.docx